# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 72 ಪ್ರಾ.ಸಾ. :53**

| | | |
|---|---|---|
| ಸಾಕ್ಷಿಯ ಹೆಸರು | : | ರಾಮ ಮೋಹನ ಪಿ.ಬಿ. |
| ತಂದೆಯ ಹೆಸರು | : | ಕೆ. ಬಾಲಸುಬ್ರಹ್ಮಣ್ಯಂ |
| ವಯಸ್ಸು | : | 48 ವರ್ಷ |
| ಕೆಲಸ | : | ನೋಡಲ್ ಆಫೀಸರ್, ವೊಡಾಫೋನ್ ಕಂಪನಿ |
| ವಾಸ | : | ಬೆಂಗಳೂರು |

**ದಿನಾಂಕಃ 27-11-2025 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-</u>**

1. ನಾನು 01-02-2024 ರಿಂದ ಇಲ್ಲಿಯವರೆಗೆ ವೊಡಾಫೋನ್ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯಕ್ಕೆ ನೋಡಲ್ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನ ಅಧಿಕಾರ ವ್ಯಾಪ್ತಿ ಪೂರ್ತಿ ಕರ್ನಾಟಕ ರಾಜ್ಯಕ್ಕೆ ಇರುತ್ತದೆ. ನನ್ನ ಹುದ್ದೆಯಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದ ಪ್ರಕಾಶ ಜಿ. ರವರು ನೌಕರಿಯನ್ನು ಬಿಟ್ಟಿರುತ್ತಾರೆ ಹಾಗೂ ಅವರು ಈಗ ಎಲ್ಲಿದ್ದಾರೆ ಹಾಗೂ ಏನು ನೌಕರಿ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರು ಈ ಹಿಂದೆ ನಮ್ಮ ಕಚೇರಿಯಲ್ಲಿ ಮಾಡಿದ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಯಾವುದೇ ಅಪರಾಧಿಕ ಪ್ರಕರಣಗಳಲ್ಲಿ, ಪೊಲೀಸರು ಸಿ.ಡಿ.ಆರ್ ಹಾಗೂ ಗ್ರಾಹಕರಿಗೆ ಸಂಬಂಧಿಸಿದ ಮಾಹಿತಿಯನ್ನು ಕೇಳಿದ್ದಲ್ಲಿ, ಅವುಗಳನ್ನು ನೀಡುವ ಅಧಿಕಾರ ನನಗೆ ಇರುತ್ತದೆ.

2. ಸಾಮಾನ್ಯವಾಗಿ ಯಾರಾದರೂ ವೊಡಾಫೋನ್ ಕಂಪನಿಯಿಂದ ಸಿಮ್ ಖರೀದಿಸಿದಲ್ಲಿ, ಅವರು ಸಲ್ಲಿಸುವ ಅರ್ಜಿ ಮತ್ತು ದಾಖಲಾತಿಗಳು ನಮ್ಮ ಕಚೇರಿಯಲ್ಲಿ ಲಭ್ಯವಿರುತ್ತವೆ. ಗ್ರಾಹಕರು ಸಿಮ್ ಖರೀದಿಸಿ, ಅದನ್ನು ಮೊಬೈಲಿಗೆ ಅಳವಡಿಸಿದ ನಂತರ ಸದರಿ ನಂಬರಿನಿಂದ

ಯಾವುದೇ ಕರೆಗಳು ಮಾಡಿದ್ದಲ್ಲಿ ಅಥವಾ ಯಾವುದೇ ಕರೆಗಳು ಬಂದಲ್ಲಿ, ಅದರ ಸಿ.ಡಿ.ಆರ್. ಮಾಹಿತಿಯು ಪೂನಾದ ಮುಖ್ಯ ಕಚೇರಿಯ ಸರ್ವರ್ ನಲ್ಲಿ ಇದ್ದು, ಯಾರಾದರೂ ಪೊಲೀಸರು ಅಪರಾಧಿಕ ಪ್ರಕರಣಗಳಲ್ಲಿ ಸಿ.ಡಿ.ಆರ್. ಮಾಹಿತಿ ಕೋರಿದ್ದಲ್ಲಿ, ಅದನ್ನು ಮುಖ್ಯ ಕಚೇರಿಯ ಸರ್ವರ್ ಗೆ ಲಾಗಿನ್ ಆಗಿ, ಕೋರಿಕೊಂಡ ನಂಬರುಗಳ ಸಿ.ಡಿ.ಆರ್. ನ್ನು ಡೌನ್‌ಲೋಡ್ ಮಾಡಿ, ಪೊಲೀಸರಿಗೆ ನೀಡುತ್ತೇವೆ.

3. ದಿ.16-01-2019 ರಂದು ಕಾರವಾರದ ಪೊಲೀಸ್ ಅಧೀಕ್ಷಕರ ಕಚೇರಿಯಿಂದ ಒಂದು ಕೋರಿಕೆ ಪತ್ರ ಬಂದಿದ್ದು, ಅದರಲ್ಲಿ ಕಾರವಾರ ನಗರ ಠಾಣೆಯ ಗುನ್ನಾ ನಂ.148/2018 ರಲ್ಲಿ ವೊಡಾಫೋನ್ ನಂಬರಿನ ಸಿ.ಡಿ.ಆರ್ ಮತ್ತು ಸಿ.ಎ.ಎಫ್ (customer application form) ಗಳನ್ನು 65-ಬಿ ಪ್ರಮಾಣ ಪತ್ರದೊಂದಿಗೆ ನೀಡುವಂತೆ ಕೋರಿರುತ್ತಾರೆ. ಅದರಂತೆ ಅವರು ಕೋರಿಕೆ ಪತ್ರದಲ್ಲಿ ನಮೂದಿಸಿದ ನಂಬರ್ 9742740411 ನ ದಿ.01-10-2018 ರಿಂದ ದಿ.23-10-2018 ರವರೆಗಿನ ಸಿ.ಡಿ.ಆರ್. ನ್ನು ಡೌನ್‌ಲೋಡ್ ಮಾಡಿ, ಪ್ರಿಂಟ್ ಮಾಡಿ, ದೃಢೀಕರಿಸಿ ನೀಡಿರುತ್ತಾರೆ ಹಾಗೂ ಅದರೊಂದಿಗೆ ಸಿ.ಎ.ಎಫ್.ನ ದೃಢೀಕರಿಸಿದ ಪ್ರತಿಯನ್ನೂ ಸಹ 65-ಬಿ ಪ್ರಮಾಣ ಪತ್ರದೊಂದಿಗೆ ಪೊಲೀಸರಿಗೆ ನೀಡಿರುತ್ತಾರೆ. ಸಾಕ್ಷಿಯು ತನ್ನ ಹಿಂದಿನ ಪರ್ಯಾಯ ನೋಡಲ್ ಆಫೀಸರ್ ರವರು ನೀಡಿದ 65-ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-130 ಎಂದು, ಪ್ರಕಾಶ್ ರವರ ಸಹಿಯನ್ನು ನಿಪಿ-130(ಎ) ಎಂದು ಗುರುತಿಸಲಾಯಿತು. ಸಿ.ಎ.ಎಫ್. ನ ದೃಢೀಕೃತ ಪ್ರತಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದರ ಪ್ರತಿ ಪುಟಗಳನ್ನು ನಿಪಿ-130/1 ರಿಂದ ನಿಪಿ-130/3 ಎಂದು, ಅದರ ಮೇಲಿರುವ ಸಹಿಗಳನ್ನು ನಿಪಿ-130/1(ಎ) ರಿಂದ 130/3(ಎ) ಎಂದು ಗುರುತಿಸಲಾಯಿತು. ಅದೇ ರೀತಿ, ಸಾಕ್ಷಿಯು ಸಿ.ಡಿ.ಆರ್. ನ ದೃಢೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದರ ಪ್ರತಿ ಪುಟಗಳನ್ನು ನಿಪಿ-130/4 ರಿಂದ ನಿಪಿ-130/15 ಎಂದು, ಅದರ ಮೊದಲ ಹಾಗೂ ಕೊನೆಯ ಪುಟದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-130/4(ಎ) ಮತ್ತು 130/15(ಎ) ಎಂದು ಗುರುತಿಸಲಾಯಿತು. ನಮ್ಮಿಂದ ನೀಡಿರುವ ಸಿ.ಡಿ.ಆರ್. ಮಾಹಿತಿಯು ನೈಜವಾಗಿರುತ್ತದೆ ಎಂದು 65-ಬಿ ಪ್ರಮಾಣ ಪತ್ರವನ್ನು ನೀಡಿದ್ದೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

4. ನಿಪಿ–130 ಸಿ.ಡಿ.ಆರ್. ಗೆ ಸಂಬಂಧಿಸಿದ ದಾಖಲೆಯನ್ನು ನನ್ನ ಹಿಂದಿನ ನೋಡಲ್ ಆಫೀಸರ್ ರವರು ನೀಡಿದ ಕಾರಣ, ನನಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ವೊಡಾಫೋನ್ ಕಂಪನಿಯವರು ಅಧಿಕಾರವನ್ನು ನೀಡಿದ್ದಾರಾ? ಎಂದರೆ ಸಾಕ್ಷಿಯು ನಾನು ಕಂಪನಿಗೆ ನೇಮಕಗೊಂಡ ಅಧಿಕಾರಿಯಾಗಿದ್ದು, ಪ್ರತ್ಯೇಕ ಅಧಿಕಾರ ಪತ್ರ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ–130/65–ಬಿ ಪ್ರಮಾಣ ಪತ್ರದಲ್ಲಿ ಸಿ.ಡಿ.ಆರ್. ನ್ನು ಡೌನ್ ಲೋಡ್ ಮಾಡಿ ಪ್ರಿಂಟ್ ಮಾಡಿದ ಕಂಪ್ಯೂಟರ್ ಹಾಗೂ ಅನುಸರಿಸಿದ ವಿಧಾನವನ್ನು ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ, ಸದರಿ ಕಂಪ್ಯೂಟರನ್ನು ಮಾನಿಟರಿಂಗ್ ಮಾಡುತ್ತಿದ್ದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಯಾವುದೇ ಒಂದು ಕಂಪ್ಯೂಟರಿನ ಸರ್ವರನ್ನು ಗುರುತಿಸಲು ಅದರ location area code (LAC), mobile country code (MCC), mobile network code (MNC) ಹಾಗೂ ಐ.ಪಿ. ಅಡ್ರೆಸ್ (internet protocol) ನಮೂದಿಸಿಲ್ಲ ಎಂದರೆ ಸರಿ. ಕಂಪ್ಯೂಟರ್ ಹಾಗೂ ಸರ್ವರ್ ಮತ್ತು ಇತರೇ ಉಪಕರಣಗಳು ಸುಸ್ಥಿತಿಯಲ್ಲಿ ಇದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸಾಕ್ಷಿಯು ಅವುಗಳು ಸುಸ್ಥಿತಿಯಲ್ಲಿದ್ದ ಕಾರಣದಿಂದಲೇ, ನಾನು ನೀಡಿದ ದಾಖಲೆಗಳನ್ನು ಪ್ರಿಂಟ್ ಮಾಡಲು ಸಾಧ್ಯವಾಗಿರುತ್ತದೆ ಎಂದು ನುಡಿಯುತ್ತಾರೆ. ನಾವು ನೀಡಿದ 65–ಬಿ ಪ್ರಮಾಣ ಪತ್ರವು ನಿಯಮಾನುಸಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸಿ.ಡಿ.ಆರ್., ಸಿ.ಎ.ಎಫ್ ಗಳನ್ನು ಹಾಗೂ 65–ಬಿ ಪ್ರಮಾಣ ಪತ್ರಗಳನ್ನು ಪೊಲೀಸರಿಗೆ ಅನುಕೂಲವಾಗುವಂತೆ ಸೃಷ್ಠಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

2 ಮತ್ತು 3 ನೇ ಆರೋಪಿತರ ಪರ ವಕೀಲರು ಈ ದಿನ ನ್ಯಾಯಾಲಯದಲ್ಲಿ ಹಾಜರಿಲ್ಲದ ಕಾರಣ, 2 ಮತ್ತು 3 ನೇ ಆರೋಪಿತರು ಸ್ವತಃ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀಮತಿ ಎಸ್.ಎಸ್.ಜಿ. ವಕೀಲರಿಂದಃ–**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.